# ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ: ಎಸ್‌ವೈಎನ್/ಎಸ್1/ವಿ.ಸ./2021-22

ಜ್ಞಾನ ಭಾರತಿ
ಬೆಂಗಳೂರು-560 056
ದಿನಾಂಕ: 18-01-2022

**ಗೆ,**

***ಸಿಂಡಿಕೇಟ್ ಸದಸ್ಯರು,***
ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು.

**ಮಾನ್ಯರೆ,**

**ವಿಷಯ:** ದಿನಾಂಕ 18-01-2022ರಂದು ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡವಳಿಗಳು.

***

ದಿನಾಂಕ 18-01-2022ರಂದು ಬೆಳಗ್ಗೆ 11.00 ಗಂಟೆಗೆ ಬೋರ್ಡ್ ರೂಂ, ಆಡಳಿತ ಕಛೇರಿ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-560 056, ಇಲ್ಲಿ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ ಬೆಂಗಳೂರು ವಿಶ್ವವಿದ್ಯಾಲಯ ಪರಿನಿಯಮಾವಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ನಡವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ ಸದರಿ ಪರಿನಿಯಮಾವಳಿಯನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

**ಕುಲಸಚಿವರು**

ಲಗತ್ತು: ಮೇಲಿನಂತೆ.

# ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ: ಎಸ್‌ವೈಎನ್/ಎಸ್1/ವಿ.ಸ/2021–22

ಜ್ಞಾನಭಾರತಿ
ಬೆಂಗಳೂರು–560 056
ದಿನಾಂಕ: 18–01–2022

**ದಿನಾಂಕ 18–01–2022 ರಂದು ಬೆಳಿಗ್ಗೆ 11.00 ಗಂಟೆಗೆ ಬೋರ್ಡ್ ರೂಮ್, ಆಡಳಿತ ಕಛೇರಿ, ಜ್ಞಾನಭಾರತಿ, ಬೆಂಗಳೂರು–560 056, ಇಲ್ಲಿ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡವಳಿಗಳು.**

**ಹಾಜರಾದ ಸದಸ್ಯರು:**

| | | | |
|---|---|---|---|
| 1. | ಪ್ರೊ. ವೇಣುಗೋಪಾಲ್ ಕೆ.ಆರ್.<br>ಕುಲಪತಿಗಳು | – | ಸಭಾಧ್ಯಕ್ಷರು |
| 2. | ಪ್ರೊ. ಎನ್. ದಶರಥ್ | – | ಸದಸ್ಯರು |
| 3. | ಡಾ. ಎಂ. ಶೈಲಜ | – | ಸದಸ್ಯರು |
| 4. | ಶ್ರೀ ಕುಮಾರ ಟಿ, | – | ಸದಸ್ಯರು |
| 5. | ಡಾ. ಧನಂಜಯ ಬಿ.ಆರ್ | – | ಸದಸ್ಯರು |
| 6. | ಪ್ರೊ. ಜಯಕುಮಾರ್ ಜಿ. ರೆಡ್ಡಿ | – | ಸದಸ್ಯರು |
| 7. | ಪ್ರೊ. ಜೆ.ಟಿ. ದೇವರಾಜು,<br>ಕುಲಸಚಿವರು (ಮೌಲ್ಯಮಾಪನ) | – | ಸದಸ್ಯರು |
| 8. | ಪ್ರೊ. ಎಂ ಕೊಟ್ರೇಶ್,<br>ಕುಲಸಚಿವರು | – | ಸದಸ್ಯ ಕಾರ್ಯದರ್ಶಿ |

ಒಂದು ನಿಮಿಷ ಪ್ರಾರ್ಥನೆಯ ನಂತರ ಸಭೆ ಪ್ರಾರಂಭವಾಯಿತು.

ಕುಲಸಚಿವರು ಮಾತನಾಡಿ, ಕುಲಪತಿಗಳನ್ನು ಮತ್ತು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳನ್ನು ಸ್ವಾಗತಿಸಿದರು ಹಾಗೂ ಸಭೆ ನಡೆಸಿಕೊಡುವಂತೆ ಅಧ್ಯಕ್ಷರನ್ನು ಕೋರಿದರು.

ಕುಲಪತಿಗಳು ಮಾತನಾಡಿ ಇಂದು ಮಂಡಿತವಾಗಿರುವ ಕೆಲವೊಂದು ವಿಷಯಗಳ ಬಗ್ಗೆ ಚರ್ಚಿಸಲು ವಿಶೇಷ ಸಿಂಡಿಕೇಟ್ ಸಭೆ ನಡೆಸಬೇಕೆಂದು ದಿನಾಂಕ:17–11–2021ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ನಿರ್ಣಯಿಸಲಾಗಿತ್ತು. ಕಳೆದ ಸಭೆಯಲ್ಲಿಯೂ ಕೂಡ ವಿಶೇಷ ಸಿಂಡಿಕೇಟ್ ಸಭೆ ಕರೆಯುವ ಬಗ್ಗೆ ತಿಳಿಸಲಾಗಿತ್ತು. ಆದಕಾರಣ, ದಿನಾಂಕ:14–01–2022ರಂದು ಕರೆದಿದ್ದ ವಿಶೇಷ ಸಿಂಡಿಕೇಟ್ ಸಭೆಯನ್ನು ಇಂದು ಆಯೋಜಿಸಲಾಗಿದೆ. ಅವರು, ವಿಶ್ವವಿದ್ಯಾಲಯದ ಪರಿನಿಯಮಾವಳಿ 5.2ರನ್ನು ಉಲ್ಲೇಖಿಸಿ 'Quorum: The quorum for a meeting of the Syndicate shall be Seven' ಈ ಸಿಂಡಿಕೇಟ್ ಸಭೆಯಲ್ಲಿ 8 ಜನ ಸದಸ್ಯರಿದ್ದು, ಸಭೆಯನ್ನು ನಡೆಸಲು ಕೋರಂ ಇದೆ ಎಂದು ತಿಳಿಸಿದರು. ನಂತರ ಕಾರ್ಯಸೂಚಿಯನ್ನು ಚರ್ಚೆಗೆ ತೆಗೆದುಕೊಳ್ಳಲಾಯಿತು.

**_Proceedings of the Special meeting of the Syndicate held on 18.01.2022_**

**ವಿಷಯ ಸಂಖ್ಯೆ 1:** ಅನುಕಂಪದ ಆಧಾರದ ಮೇಲೆ ಗ್ರೂಪ್ 'ಡಿ'ಹುದ್ದೆಗೆ ನೇಮಕಾತಿ ಹೊಂದಿರುವ ನೌಕರರನ್ನು ವಿದ್ಯಾರ್ಹತೆಗೆ ತಕ್ಕಂತೆ ಗ್ರೂಪ್ 'ಸಿ'ಹುದ್ದೆಗೆ ಪರಿಗಣಿಸಿ ನೀಡಿರುವ ಆದೇಶದ ಬಗ್ಗೆ ಸರ್ಕಾರದ ಪತ್ರ ದಿನಾಂಕ 15.11.2021 ರಲ್ಲಿ ಅಭಿಪ್ರಾಯ ನೀಡಿರುವ ವಿಷಯದ ಕುರಿತು.

ಕುಲಪತಿಗಳು ವಿವರಗಳನ್ನು ನೀಡಿ, ಸರ್ಕಾರದ ಸುತ್ತೋಲೆ ಸಂಖ್ಯೆ ಸಿಆಸುಇ 105 ಸೇಅನೇ 2017, ದಿನಾಂಕ: 27-10-2017ರಲ್ಲಿನ ನಿರ್ದೇಶನ ಹಾಗೂ ಸರ್ಕಾರದ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ: ಡಿಪಿಎಆರ್ 30 ಎಸ್‌ಎಸ್‌ಆರ್ 84 ದಿನಾಂಕ: 22-08-1985ರಲ್ಲಿನ ಆದೇಶದಂತೆ, ವಿದ್ಯಾರ್ಹತೆಗನುಗುಣವಾಗಿ ಅನುಕಂಪ ಆಧಾರಿತ ನೇಮಕಾತಿಯನ್ನು ವಿಶ್ವವಿದ್ಯಾಲಯದಲ್ಲಿ ಮಾಡದ ಕಾರಣ ಅಗತ್ಯ ವಿದ್ಯಾರ್ಹತೆ ಇದ್ದರೂ ಗ್ರೂಪ್ 'ಡಿ' ಹುದ್ದೆಗೆ ನೇಮಕಾತಿಗೊಂಡ ಶಿಕ್ಷಕೇತರ ನೌಕರರು ಕಳೆದ 20 ವರ್ಷಗಳಿಂದಲೂ ಅಹವಾಲು ಸಲ್ಲಿಸುತ್ತಿದ್ದ ಕಾರಣ ದಿನಾಂಕ: 10-09-2020ರಂದು ಸಿಂಡಿಕೇಟ್ ಸಭೆ ಈ ಹಿಂದೆ ಅನುಕಂಪದ ಆಧಾರದ ಮೇಲೆ ಗ್ರೂಪ್ 'ಡಿ' ನೇಮಕಾತಿ ಹೊಂದಿರುವ ನೌಕರರನ್ನು ವಿದ್ಯಾರ್ಹತೆಗೆ ತಕ್ಕಂತೆ ಗ್ರೂಪ್ 'ಸಿ' ಹುದ್ದೆಗೆ ಪರಿಗಣಿಸಿ ಅವರ ವೇತನವನ್ನು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗೊಳಪಟ್ಟು ಮರು-ನಿಗದಿಪಡಿಸಲು ಅನುಮೋದಿಸಿತ್ತು:

1. ಸಂಬಂಧಪಟ್ಟ ಪ್ರತಿ ಸಿಬ್ಬಂಧಿಯಿಂದ ಈ ವಿಷಯವಾಗಿ ತಾವು ಯಾವುದೇ ಕಾರಣಕ್ಕೂ ಬೇಬಾಕಿ ಕೋರುವುದಿಲ್ಲ.
2. ವೇತನ ಮರು-ನಿಗದಿಗೊಳಿಸಿದ ನಂತರ, ಈಗಿರುವ ಅವರ ಜೇಷ್ಠತೆಗನುಸಾರವಾಗಿಯೇ ಮುಂದುವರೆಯುತ್ತೇವೆ ಹಾಗೂ ಜೇಷ್ಠತೆಯನ್ನು ಕೋರುವುದಿಲ್ಲ.
3. ಈ ನಿರ್ಧಾರ ಪರಿಣಾಮವಾಗಿ ಹಿಂದಿನ ದಿನಾಂಕಗಳಿಂದ ಮುಂಬಡ್ತಿಯನ್ನು ಕೋರುವುದಿಲ್ಲ.

ಸದರಿ ನಿರ್ಣಯಕ್ಕೆ ಹಿಂದಿನ ಕುಲಸಚಿವರು ಅಸಮ್ಮತಿ ಸೂಚಿಸಿದ್ದರು. ಮೂರು ಬಾರಿ ನಿರ್ದೇಶನ ನೀಡಿದ್ದರು ಸಿಂಡಿಕೇಟ್ ನಿರ್ಣಯದಂತೆ ಆದೇಶ ನೀಡದ ಕಾರಣ ಉಪಕುಲಸಚಿವರಿಂದ ಆದೇಶ ಹೊರಡಿಸಲಾಗಿತ್ತು. ಸದರಿ ಆದೇಶದ ವಿರುದ್ಧವಾಗಿ ಆಗಿನ ಕುಲಸಚಿವರು ಸರ್ಕಾರಕ್ಕೆ ಪತ್ರ ಬರೆದಿದ್ದರು. ಸರ್ಕಾರ ದಿನಾಂಕ: 03-02-2021ರಂದು ವಿಶ್ವವಿದ್ಯಾಲಯಕ್ಕೆ ನೋಟೀಸ್ ಕಳುಹಿಸಿ, ಸದರಿ ನಿರ್ಣಯವನ್ನು ಕೆ.ಎಸ್.ಯು. ಅಧಿನಿಯಮ 2000ದ ಪ್ರಕರಣ 10ರ ಉಪ ಪ್ರಕರಣ(1)ದಡಿಯಲ್ಲಿ ಏಕೆ ರದ್ದುಪಡಿಸಬಾರದೆಂದು ಸಮಜಾಯಿಷಿ ಕೇಳಿತ್ತು. ಉತ್ತರವಾಗಿ ದಿನಾಂಕ: 06-02-2021ರಂದು ನಾನು ಸದರಿ ವಿಷಯದ ಬಗ್ಗೆ ಎಲ್ಲಾ ವಿವರಗಳನ್ನು ಸರ್ಕಾರಕ್ಕೆ ಸಲ್ಲಿಸಿ, ವಿಶ್ವವಿದ್ಯಾಲಯವು ಸರ್ಕಾರ ಹಾಗೂ ಪರಿನಿಯಮಗಳ ಚೌಕಟ್ಟಿನಲ್ಲಿ ಕ್ರಮ ತೆಗೆದುಕೊಂಡಿದೆ ಎಂದು ವಿವರಣೆ ನೀಡಲಾಗಿತ್ತು. ತತ್ಪರಿಣಾಮವಾಗಿ ಸರ್ಕಾರವು ಪತ್ರ ಈ ಕಛೇರಿ ಸಂಖ್ಯೆ ಇಡಿ 06 ಯುಬಿವಿ 2020 ದಿನಾಂಕ: 15-11-2021ರ ಮೂಲಕ ಪತ್ರ ಬರೆದು ಸದರಿ ಪತ್ರದಲ್ಲಿ ಕಾನೂನು ಇಲಾಖೆಯು ನೀಡಿರುವ ಅಭಿಪ್ರಾಯವನ್ನು ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿ ಸಿಂಡಿಕೇಟ್ ತೀರ್ಮಾನವನ್ನು ತೆಗೆದುಕೊಳ್ಳಲಿ ಎಂದು ನಿರ್ದೇಶನ ನೀಡಿದ್ದಾರೆ. ಸರ್ಕಾರದ ಇತರ ಇಲಾಖೆಗಳಲ್ಲಿ ಅನುಕಂಪದ ಆಧಾರದ ಮೇಲೆ ಕೆಳ ಹಂತದ ಹುದ್ದೆಗೆ ನೇಮಕಾತಿ ಮಾಡಿ ನಂತರ ಅಭ್ಯರ್ಥಿಗಳು ವಿದ್ಯಾರ್ಹತೆಗನುಗುಣವಾಗಿ

ನೇಮಕಾತಿ ಮಾಡಲು ಕೋರಿದ್ದಂತಹ ಪ್ರಕರಣಗಳಲ್ಲಿ ಸದರಿ ಇಲಾಖೆಗಳು ಕರ್ನಾಟಕ ನಾಗರೀಕ ಸೇವಾ ನಿಯಮ ***Appointment on compassionate grounds rules 1996, Rule 6 (4)*** ಅನ್ನು ಉಲ್ಲೇಖಿಸಿ ನೀಡಲಾದ ಹಿಂಬರಹವನ್ನು ಮಾನ್ಯ ಉಚ್ಚ ನ್ಯಾಯಾಲಯವು ರದ್ದುಗೊಳಿಸಿ, ವಿದ್ಯಾರ್ಹತೆ ತಕ್ಕಂತೆ ಅನುಕಂಪದ ಆಧಾರದ ನೇಮಕಾತಿ ನೀಡಲು ನಿರ್ದೇಶನ ನೀಡಿರುವ ಉಚ್ಚನ್ಯಾಯಾಲಯದ ಕೆಳಕಂಡ ಆದೇಶಗಳ ಬಗ್ಗೆ ವಿವರಗಳನ್ನು ಸಭೆಗೆ ನೀಡಿದರು.

1. Order dated: 23-07-2020 passed in Writ Petition No. 113211/2019 Sri Girish Ramachandra Hulakund v/s The Director of Municipal Administration, Bengaluru.
2. Order dated: 28-01-2009 passed in Writ Appeal No.2060/2006 between the Director of Municipal Administration v/s Mr. H.N. Guruprasad
3. Order dated: 14-06-2006 passed in Writ Petition No. 32634/2003 between Mr. H.N. Guruprasad v/s the Director of Municipal Administration.

ಈ ಹಿಂದೆ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಗ್ರೂಪ್ 'ಸಿ' ಹುದ್ದೆಗೆ ಅಗತ್ಯ ವಿದ್ಯಾರ್ಹತೆ ಇದ್ದರೂ ಗ್ರೂಪ್ 'ಡಿ' ಹುದ್ದೆಗೆ ಅನುಕಂಪದ ಆಧಾರದಲ್ಲಿ ನೇಮಕಾತಿ ಮಾಡಲಾದ ಪ್ರಕರಣಗಳು ಮೇಲ್ಕಂಡ ಪ್ರಕರಣಗಳಿಗೆ ಸಮಾನಾಂತರ ಪ್ರಕರಣಗಳಾಗಿವೆ.

ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಗ್ರೂಪ್ 'ಸಿ' ಹುದ್ದೆಗೆ ಅಗತ್ಯ ವಿದ್ಯಾರ್ಹತೆ ಇದ್ದರೂ ಗ್ರೂಪ್ 'ಡಿ' ಹುದ್ದೆಗೆ ಅನುಕಂಪದ ಆಧಾರದಲ್ಲಿ ನೇಮಕಾತಿ ಮಾಡಲಾದ ಪ್ರಕರಣಗಳನ್ನು ಮೇಲ್ಕಂಡ ನ್ಯಾಯಾಲಯದ ಆದೇಶದಂತೆಯೇ ಸರಿಪಡಿಸಿ ಅವರ ನೇಮಕಾತಿ ದಿನಾಂಕದಿಂದ ಗ್ರೂಪ್ 'ಸಿ' ಹುದ್ದೆಗೆ ನೇಮಕಾತಿಯನ್ನು ಪರಿಗಣಿಸಬಹುದಾಗಿದೆ ಎಂದು ತಿಳಿಸಿದರು.

ಕುಲಪತಿಗಳು ಮುಂದುವರೆದು ಮಾತನಾಡಿ, ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಈ ಹಿಂದೆ 1984-86ರ ವರೆಗೆ ಅನುಕಂಪದ ಆಧಾರದ ಮೇಲೆ ಗ್ರೂಪ್ 'ಸಿ' ಹುದ್ದೆಗೆ ನೇಮಕ ಮಾಡಲಾಗಿದೆ. ನಂತರ 1987 ರಿಂದ 94ರ ವರೆಗೆ ಗ್ರೂಪ್ 'ಡಿ' ಹುದ್ದೆಗೆ ನೇಮಕಗೊಂಡಿದ್ದ ಶ್ರೀ ವೆಂಕಟಪ್ಪ ಅವರನ್ನೂ ಸೇರಿ 15 ಜನ ನೌಕರರಿಗೆ ಅವರ ವಿದ್ಯಾರ್ಹತೆಯನ್ನು ಪರಿಗಣಿಸಿ ಅವರು ನೇಮಕಾತಿ ಹೊಂದಿದ ದಿನಾಂಕಗಳಿಂದಲೇ ಗ್ರೂಪ್ 'ಸಿ' ಹುದ್ದೆಗೆ ನೇಮಕಾತಿ ಮಾಡಿ ಜ್ಯೇಷ್ಠತೆ ಮತ್ತು ಇತರ ಸೌಲಭ್ಯಗಳನ್ನು ನೀಡಿ ಮರು-ಆದೇಶ ಹೊರಡಿಸಲಾಗಿದೆ. ಸದರಿ ವಿಷಯದ ಬಗ್ಗೆ ಸರ್ಕಾರದೊಂದಿಗೆ ಸಹ ಈ ಹಿಂದೆ ಚರ್ಚಿಸಿದ್ದು, ಆ ಸಂದರ್ಭದಲ್ಲಿ ಹಿಂದಿನ ಕುಲಸಚಿವರು ಸಹ ಹಾಜರಿದ್ದರು. ಸರ್ಕಾರವೂ ಕೂಡ ಈ ಸಮಸ್ಯೆಯನ್ನು ಬಗೆಹರಿಸಲು ಸೂಚಿಸಿದೆ. ಆದಕಾರಣ ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಅರ್ಹತೆ ಇದ್ದರೂ ಗ್ರೂಪ್ 'ಡಿ' ಹುದ್ದೆಗೆ ನೇಮಕಾತಿ ಹೊಂದಿರುವ 87 ಜನ ನೌಕರರಿಗೆ ವಿಶ್ವವಿದ್ಯಾಲಯದ ಆದೇಶ ದಿನಾಂಕ: 02-02-2021ರಲ್ಲಿ ಹೊರಡಿಸಲಾದ ಆದೇಶದಂತೆ ಕ್ರಮ ಕೈಗೊಳ್ಳಬಹುದಾಗಿದೆ. ಇದರಿಂದಾಗಿ ಮುಂದಿನ ಅನುಕಂಪದ ಆಧಾರದ

ನೇಮಕಾತಿಗಳನ್ನು ವಿದ್ಯಾರ್ಹತೆ ಇದ್ದರೆ ಗ್ರೂಪ್ 'ಸಿ' ಹುದ್ದೆಗೆ ನೇಮಕಾತಿ ಮಾಡಲು ಸಹ ಅನುಕೂಲವಾಗುವುದು.

ಕುಲಸಚಿವರು ಮಾತನಾಡಿ, ನೌಕರರಲ್ಲಿ ಅತೃಪ್ತಿ ಇದ್ದಾಗ ಅವರಿಂದ ಹುದ್ದೆಗೆ ತಕ್ಕಂತೆ ಕೆಲಸ ಮಾಡಿಸುವುದು ಕಷ್ಟಕರ. ಆದುದರಿಂದ, ನ್ಯಾಯಯುತವಾಗಿ ಇರುವ ಬೇಡಿಕೆಗಳನ್ನು ಈಡೇರಿಸುವುದು ಒಳಿತು. ಎಲ್ಲಾ ಸಿಬ್ಬಂದಿಗಳಿಗೆ ಆಡಳಿತಾತ್ಮಕ ವಿಷಯಗಳ ಬಗ್ಗೆ ತರಬೇತಿಯನ್ನು ಸಹ ಆಯೋಜಿಸಲಾಗುವುದು ಎಂದು ತಿಳಿಸಿದರು.

**ನಿರ್ಣಯ:**

ದೀರ್ಘ ಚರ್ಚೆಯ ನಂತರ, ದಿನಾಂಕ; 10-09-2020ರಂದು ಸಿಂಡಿಕೇಟ್ ಸಭೆಯ ನಿರ್ಣಯವನ್ನು ಪುನರುಚ್ಚರಿಸಿ, ನೇಮಕಾತಿ ಸಮಯದಲ್ಲಿ ಅಗತ್ಯ ವಿದ್ಯಾರ್ಹತೆ ಇದ್ದರೂ ಗ್ರೂಪ್ 'ಡಿ' ಹುದ್ದೆಗೆ ನೇಮಕಗೊಂಡಿರುವ 87 ಸಿಬ್ಬಂದಿಗಳನ್ನು ಅವರ ನೇಮಕಾತಿ ದಿನಾಂಕದಿಂದ ಗ್ರೂಪ್ 'ಸಿ' ದರ್ಜೆಯ ಕನಿಷ್ಠ ಹುದ್ದೆಯಾದ ಕಿರಿಯ ಸಹಾಯಕ ಹುದ್ದೆಗೆ ಪರಿಗಣಿಸಲು ಮತ್ತು ಅದರಂತೆ ಹೊರಡಿಸಿರುವ ವಿಶ್ವವಿದ್ಯಾಲಯದ ಆದೇಶ ದಿನಾಂಕ: 02-02-2021ರನ್ನು ಅನುಮೋದಿಸಿ, ಅದರಲ್ಲಿ ನಿಗದಿಪಡಿಸಲಾದ ಷರತ್ತು ಮತ್ತು ನಿಬಂಧನೆಗೊಳಪಟ್ಟು ಮುಂದಿನ ಕ್ರಮ ಕೈಗೊಳ್ಳಲು ಸಿಂಡಿಕೇಟ್ ಸೂಚಿಸಿತು.

***Proceedings of the Special meeting of the Syndicate held on 18.01.2022***

**ವಿಷಯ ಸಂಖ್ಯೆ 2:** ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ 32527/2015 ಮತ್ತು 8595/2017 ರ ಆದೇಶ ದಿನಾಂಕ 17.04.2021 ರನ್ವಯ ಬೆಂಗಳೂರು ವಿಶ್ವವಿದ್ಯಾಲಯವು ಅಧೀಕ್ಷಕರ ವೃಂದದ ತಾತ್ಕಾಲಿಕ ಪಟ್ಟಿ ಅನ್ವಯ ನೀಡಿರುವ ಮುಂಬಡ್ತಿಗಳನ್ನು ಪುನರ್ ಪರಿಶೀಲಿಸುವ ಕುರಿತು ದಿನಾಂಕ 07.01.2022 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡಾವಳಿಗಳನ್ನು ಸಿಂಡಿಕೇಟ್ ಸಭೆಗೆ ಮಂಡಿಸುವ ಬಗ್ಗೆ

ಕುಲಪತಿಗಳು ಮಾತನಾಡಿ, ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ 32527/2015 ಮತ್ತು 8595/2017 ರಲ್ಲಿ ನೀಡಿರುವ ಆದೇಶ ದಿನಾಂಕ 17-04-2021 ರನ್ವಯ ಅಧೀಕ್ಷಕ ವೃಂದದ ಅಂತಿಮ ಜ್ಯೇಷ್ಠತಾ ಪಟ್ಟಿಯನ್ನು ದಿನಾಂಕ: 10-11-2021ರಂದು ಹೊರಡಿಸಿ, ಸದರಿ ಪಟ್ಟಿಯನ್ನು ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ. ಅಂತಿಮ ಜ್ಯೇಷ್ಠತಾ ಪಟ್ಟಿಯನ್ನು ನ್ಯಾಯಾಲಯವು ಒಪ್ಪಿ, ಈ ಹಿಂದೆ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಯ ಆಧಾರದ ಮೇಲೆ ಮುಂಬಡ್ತಿ ನೀಡಿದ್ದರೆ ಅದನ್ನು ಪುನರ್-ಪರಿಶೀಲಿಸಬೇಕೆಂದು ಆದೇಶಿಸಿದೆ. ಅರ್ಜಿದಾರರಾದ ಡಾ. ಜಿ. ಗೋವಿಂದರಾಜು ಹಾಗೂ ಶ್ರೀಮತಿ ಕೆ.ಜಿ. ಅನಸೂಯಮ್ಮ ಮತ್ತು ಡಾ॥ ಕೆ.ಆರ್. ಗೋವಿಂದರಾಜು ಅವರಿಗೆ ಮೇಲ್ಕಂಡ ಅಂತಿಮ ಜ್ಯೇಷ್ಠತಾ ಪಟ್ಟಿಯನುಸಾರ ಅಧೀಕ್ಷಕ ವೃಂದದವರಿಗೆ ದಿನಾಂಕ: 15-12-2021ರಂದು ಮುಂಬಡ್ತಿ ಆದೇಶ ಹೊರಡಿಸಲಾಗಿತ್ತು. ನ್ಯಾಯಾಲಯದ ಆದೇಶಾನುಸಾರ ಸಹಾಯಕ ಕುಲಸಚಿವರ ವೃಂದಕ್ಕೆ ಪದೋನ್ನತಿಯನ್ನು ಪುನರ್-ಅವಲೋಕಿಸಿ ದಿನಾಂಕ:

07-01-2022ರಂದು ಇಲಾಖಾ ಮುಂಬಡ್ತಿ ಸಮಿತಿ, ಸರ್ಕಾರದ ಆದೇಶ ದಿನಾಂಕ:03-02-1999 ಹಾಗೂ ಸದರಿ ವಿಷಯದಲ್ಲಿ ಪಡೆಯಲಾಗಿರುವ ಕಾನೂನು ಅಭಿಪ್ರಾಯವನ್ನು ಪರಿಗಣಿಸಿ, ದಿನಾಂಕ: 17-07-2015ರಿಂದ ಇಲ್ಲಿಯವರೆವಿಗೂ ನೀಡಿರುವ ಮುಂಬಡ್ತಿಗಳನ್ನು ಪರಿಶೀಲಿಸಿ, ಸಹಾಯಕ ಕುಲಸಚಿವರ ಹುದ್ದೆಗಳಿಗೆ ಬಡ್ತಿ ನೀಡುವ ಬಗ್ಗೆ ಶಿಫಾರಸ್ಸು ಮಾಡಿದೆ. ದಿನಾಂಕ: 17-07-2015ರಲ್ಲಿ ಸಹಾಯಕ ಕುಲಸಚಿವರ ವೃಂದದ ಒಟ್ಟು ಹದಿನಾಲ್ಕು ಹುದ್ದೆಗಳಲ್ಲಿ ಐದು ಜನ ಪರಿಶಿಷ್ಟ ಜಾತಿ/ಪಂಗಡದ ಅಭ್ಯರ್ಥಿಗಳು ಇರುವ ಕಾರಣ ಒಬ್ಬರನ್ನು ತೆಗೆದರೂ ಕೂಡ ನಾಲ್ಕು ಜನ ಉಳಿಯುತ್ತಾರೆ. ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 21 ಎಸ್‌ಬಿಸಿ 97 ದಿನಾಂಕ: 03-02-1999ರ ಅನುಸಾರ ಸಹಾಯಕ ಕುಲಸಚಿವರ ವೃಂದದಲ್ಲಿ ಪರಿಶಿಷ್ಟ ಜಾತಿ/ಪಂಗಡದ ಅಭ್ಯರ್ಥಿಗಳು 15%ಕ್ಕಿಂತ ಹೆಚ್ಚಾಗಿ ಇರುವುದರಿಂದ ರೋಸ್ಟರ್ ಬಿಂದು ಅನ್ವಯಿಸುವುದಿಲ್ಲ. ಆದಕಾರಣ ರೋಸ್ಟರ್ ಬಿಂದು ಒಂದರ ಎದುರಾಗಿ ಮೀಸಲಾತಿ ರಹಿತ ವರ್ಗದ ನೌಕರರನ್ನು ಪರಿಗಣಿಸಲಾಗುವುದು ಎಂದು ತಿಳಿಸಿದರು. ಡಾ. ಜಿ. ಗೋವಿಂದರಾಜು ಅವರನ್ನು ಹಿರಿಯ ಸಹಾಯಕ ಕುಲಸಚಿವರ ಆಧಾರದ ಮೇಲೆ ಅಭಿವೃದ್ಧಿ ಅಧಿಕಾರಿ ಹುದ್ದೆಗೆ ಪರಿಗಣಿಸಬಹುದಾಗಿದೆ. ಅವರು ಅಭಿವೃದ್ಧಿ ಅಧಿಕಾರಿ ಹುದ್ದೆ ಬೇಡವೆಂದಲ್ಲಿ ಮುಂದೆ ಸಧ್ಯದಲ್ಲೇ ಖಾಲಿಯಾಗುವ ಉಪಕುಲಸಚಿವ ಹುದ್ದೆಗೆ ಅವರನ್ನು ಪರಿಗಣಿಸಬಹುದಾಗಿದೆ ಎಂದು ತಿಳಿಸಿದರು.

**ನಿರ್ಣಯ:**

ಚರ್ಚೆಯ ನಂತರ, ದಿನಾಂಕ: 07-01-2022ರಂದು ಜರುಗಿದ ಇಲಾಖಾ ಮುಂಬಡ್ತಿ ಸಮಿತಿಯ ನಡಾವಳಿಯನ್ನು ಸಿಂಡಿಕೇಟ್ ಪರಿಗಣಿಸಿ ಅನುಮೋದಿಸಿತು ಹಾಗೂ ಸದರಿ ಸಮಿತಿಯ ಶಿಫಾರಸ್ಸಿನಂತೆ ಮುಂಬಡ್ತಿಯನ್ನು ನೀಡಲು ಸೂಚಿಸಿತು.

***Proceedings of the Special meeting of the Syndicate held on 18.01.2022***

**ವಿಷಯ ಸಂಖ್ಯೆ 3:** ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ ಅಧೀಕ್ಷಕರ ಹುದ್ದೆಗಳಿಗೆ ಮುಂಬಡ್ತಿ ಮೂಲಕ ಭರ್ತಿ ಮಾಡುವ ಬಗ್ಗೆ.

ಕುಲಪತಿಗಳು ಮಾತನಾಡಿ, Delegation of Powers ನಲ್ಲಿರುವಂತೆ, ಕುಲಪತಿಗಳಿಗೆ ಕ್ಲಾಸ್-3ರ ಹುದ್ದೆಗಳವರೆಗೆ ಮುಂಬಡ್ತಿ ನೀಡಲು ಅಧಿಕಾರವಿದೆ. ಆದರೂ ಕೂಡ ಅಧೀಕ್ಷಕರ ವೃಂದದಲ್ಲಿ ಖಾಲಿ ಇರುವ ಒಟ್ಟು 12(ಹನ್ನೆರಡು) ಹುದ್ದೆಗಳಿಗೆ ಹಿರಿಯ ಸಹಾಯಕ ಹುದ್ದೆಯಿಂದ ಮುಂಬಡ್ತಿ ನೀಡಲು ಸಿಂಡಿಕೇಟ್ ಮುಂದೆ ಮಾಹಿತಿಯನ್ನು ಮಂಡಿಸಲಾಗಿದೆ.

| Sl no | Nature of Powers | Vice-Chancellor | Registrar | Controller of Exam | Finance Officer |
|---|---|---|---|---|---|
| 1. | To Sancation promotions to within class-IV and III in the promotional quota as per C&R rules | Full Power | ---- | ---- | ---- |

ನಿರ್ಣಯ:

ಚರ್ಚೆಯ ನಂತರ, ಖಾಲಿ ಇರುವ ಅಧೀಕ್ಷಕರ ವೃಂದದಲ್ಲಿ ಖಾಲಿ ಇರುವ ಒಟ್ಟು 12(ಹನ್ನೆರಡು) ಹುದ್ದೆಗಳಿಗೆ ಹಿರಿಯ ಸಹಾಯಕ ಹುದ್ದೆಯಿಂದ ಜ್ಯೇಷ್ಠತೆಯನುಸಾರ ಮುಂಬಡ್ತಿ ನೀಡಲು ಸಿಂಡಿಕೇಟ್ ಅನುಮೋದಿಸಿತು. ಮುಂದುವರೆದು ನೇಮಕಾತಿ ಆದೇಶ ನೀಡುವ ಮೊದಲು ಪರಾಮರ್ಶಿತ ಟಿಪ್ಪಣಿಯಲ್ಲಿ ನಮೂದಿಸಿರುವ ನೌಕರರ ಜ್ಯೇಷ್ಠತೆ, ಮೀಸಲಾತಿ ಹಾಗೂ ಹೈದ್ರಬಾದ್ ಕರ್ನಾಟಕ ಮೀಸಲಾತಿ ಮುಂತಾದವುಗಳನ್ನು ಕೆಳಕಂಡ ಸಮಿತಿಯು ಪರಿಶೀಲಿಸಿ ನಂತರ ಕ್ರಮ ಕೈಗೊಳ್ಳಬೇಕೆಂದು ಸಿಂಡಿಕೇಟ್ ನಿರ್ಣಯಿಸಿತು:

1. ಕುಲಪತಿಗಳು — ಅಧ್ಯಕ್ಷರು
2. ಕುಲಸಚಿವರು — ಸದಸ್ಯರು
3. ಕುಲಸಚಿವರು(ಮೌ) — ಸದಸ್ಯರು
4. ಡಾ. ಎನ್. ಧಶರತ್ — ಸದಸ್ಯರು
5. ಡಾ. ಧನಂಜಯ ಬಿ.ಆರ್. — ಸದಸ್ಯರು
6. ಸಹಾಯಕ ಕುಲಸಚಿವರು ಸಿಬ್ಬಂದಿ ವಿಭಾಗ–1 — ಸಂಚಾಲಕರು



**ವಿಷಯ ಸಂಖ್ಯೆ 4:** ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ ಹಿರಿಯ ಸಹಾಯಕ ಹುದ್ದೆಗಳಿಗೆ ಮುಂಬಡ್ತಿ ಮೂಲಕ ಭರ್ತಿ ಮಾಡುವ ಬಗ್ಗೆ.

ಖಾಲಿ ಉಳಿಯುವ 14(ಹದಿನಾಲ್ಕು) ಹಿರಿಯ ಸಹಾಯಕ ಹುದ್ದೆಗಳಿಗೆ ಮುಂಬಡ್ತಿ ಮೂಲಕ ಬಡ್ತಿ ಮಾಡಬೇಕಾಗುತ್ತದೆ ಹಾಗೂ Delegation of Powers ನಲ್ಲಿ ಈ ರೀತಿ ಇದೆ ಎಂದು ಸಭೆಯ ಗಮನಕ್ಕೆ ತರಲಾಯಿತು.

| Sl no | Nature of Powers | Vice-Chancellor | Registrar | Controller of Exam | Finance Officer |
|---|---|---|---|---|---|
| 1. | To Sancation promotions to within class-IV and III in the promotional quota as per C&R rules | Full Power | ---- | ---- | ---- |

ನಿರ್ಣಯ:

ಚರ್ಚೆಯ ನಂತರ, ಖಾಲಿ ಇರುವ 14(ಹದಿನಾಲ್ಕು) ಹಿರಿಯ ಸಹಾಯಕ ಹುದ್ದೆಗಳಿಗೆ ಕೂಡಲೇ ಸಹಾಯ ಹುದ್ದೆಯಿಂದ ಮುಂಬಡ್ತಿ ನೀಡಬೇಕೆಂದು ಸಿಂಡಿಕೇಟ್ ಅನುಮೋದಿಸಿತು. ಮುಂಬಡ್ತಿ ಆದೇಶ ಹೊರಡಿಸುವ

ಮೊದಲು, ಪರಾಮರ್ಶಿತ ಟಿಪ್ಪಣಿಯಲ್ಲಿ ನಮೂದಿಸಿರುವ ಸಹಾಯಕರುಗಳ ಜ್ಯೇಷ್ಠತೆ ಹಾಗೂ ಇತರ ವಿವರಗಳನ್ನು ವಿಷಯ ಸಂಖ್ಯೆ 3ರಲ್ಲಿ ರಚಿಸಲಾದ ಸಮಿತಿಯಿಂದ ಪರಿಶೀಲಿಸಿ, ನಂತರ ಕ್ರಮ ಕೈಗೊಳ್ಳಬೇಕೆಂದು ಸಿಂಡಿಕೇಟ್ ನಿರ್ಣಯಿಸಿತು.

*Proceedings of the Special meeting of the Syndicate held on 18.01.2022*

**ವಿಷಯ ಸಂಖ್ಯೆ 5:** ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ ಸಹಾಯಕ ಮತ್ತು ಕಿರಿಯ ಸಹಾಯಕ ವೃಂದದ ಬೋಧಕೇತರ ಹುದ್ದೆಗಳಿಗೆ ಮುಂಬಡ್ತಿ ನೀಡುವ ಬಗ್ಗೆ.

ಕುಲಪತಿಗಳು ಮಾತನಾಡಿ, ಸಹಾಯಕ ಹುದ್ದೆಗೆ 50:50ರ ಅನುಪಾತದಲ್ಲಿ ನೇರ ನೇಮಕಾತಿ ಹಾಗೂ ಮುಂಬಡ್ತಿ ಮೂಲಕ ಕಿರಿಯ ಸಹಾಯಕ ಹುದ್ದೆಯಿಂದ ತುಂಬಬೇಕು ಮತ್ತು ಕಿರಿಯ ಸಹಾಯಕ ಹುದ್ದೆಗೆ 75:25ರ ಅನುಪಾತದಲ್ಲಿ ನೇರ ನೇಮಕಾತಿ ಮತ್ತು ಗ್ರೂಪ್ ಡಿ ಹುದ್ದೆಯಿಂದ ಬಡ್ತಿಯ ಮೂಲಕ ತುಂಬಹುದಾಗಿದೆ.

ಪ್ರಸ್ತುತ ಸಹಾಯಕ ಹುದ್ದೆಯಲ್ಲಿ ನೇರ ನೇಮಕಾತಿ ಎದುರಾಗಿ 36 ಹುದ್ದೆಗಳು ಹಾಗೂ ಕಿರಿಯ ಸಹಾಯಕ ವೃಂದದಲ್ಲಿ 19 ಖಾಲಿ ಹುದ್ದೆಗಳು ಲಭ್ಯವಿದೆ. ಕಳೆದ 25 ವರ್ಷಗಳಿಂದಲೂ ಬ್ಯಾಕ್‌ಲಾಗ್ ನೇಮಕಾತಿ ಹೊರತುಪಡಿಸಿ ಕಿರಿಯ ಸಹಾಯಕ ಹಾಗೂ ಸಹಾಯಕ ಹುದ್ದೆಗೆ ನೇರ ನೇಮಕಾತಿ ನಡೆದಿರುವುದಿಲ್ಲ. ಈ ಕಾರಣದಿಂದ ಹಾಗೂ ವಿಶ್ವವಿದ್ಯಾಲಯದ ಕೆಲಸದ ಹಿತದೃಷ್ಟಿಯಿಂದ ಈ ಹಿಂದಿನ ಅವಧಿಗಳಲ್ಲಿ ಕುಲಪತಿಗಳು ನೇರ ನೇಮಕಾತಿ ಎದುರಾಗಿ ಮೀಸಲಿರಿಸಿದ್ದ ಹುದ್ದೆಗಳನ್ನು ತಾತ್ಕಾಲಿಕವಾಗಿ Freez ಮಾಡಿ ಮುಂಬಡ್ತಿ ಮೂಲಕ ಕಾಲ ಕಾಲಕ್ಕೆ ಖಾಲಿ ಉಳಿದಿದ್ದ ಸದರಿ ಹುದ್ದೆಗಳನ್ನು ತುಂಬಿದ್ದಾರೆ. ಆದಕಾರಣ, ಕಳೆದ ಎರಡು ಮೂರು ವರ್ಷಗಳಿಂದಲೂ ಈ ಹುದ್ದೆಗಳು ಖಾಲಿ ಇರುವುದರಿಂದ ಪರಾಮರ್ಶಿತ ಟಿಪ್ಪಣಿಯಲ್ಲಿ ನಮೂದಿಸಿರುವ ನೌಕರರು ಕಳೆದ ಹನ್ನೆರಡು ವರ್ಷಗಳಿಂದ ಯಾವುದೇ ಮುಂಬಡ್ತಿ ಇಲ್ಲದೇ ಕೆಲಸ ನಿರ್ವಹಿಸುತ್ತಿರುವುದರಿಂದ ಹಾಗೂ ವಿಶ್ವವಿದ್ಯಾಲಯದ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಸದರಿ ನೌಕರರಿಗೆ ಮುಂಬಡ್ತಿ ನೀಡಬಹುದಾಗಿದೆ ಎಂದು ತಿಳಿಸಿದರು.

ಡಾ. ಧನಂಜಯ ಬಿ.ಆರ್. ಅವರು ಮಾತನಾಡಿ, ನೇರ ನೇಮಕಾತಿಗೆ ಮೀಸಲಿರಿಸಿದ್ದ ಹುದ್ದೆಗಳಿಗೆ ಮಂಬಡ್ತಿ ನೀಡಿದ್ದಲ್ಲಿ ಹೊಸಬರಿಗೆ ಅವಕಾಶ ತಪ್ಪಿಸಿದಂತಾಗುತ್ತದೆ. ಆದಕಾರಣ ನೇರ ನೇಮಕಾತಿಗೆ ಕ್ರಮ ಕೈಗೊಳ್ಳುವುದು ಉಚಿತವೆಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಸರ್ಕಾರಕ್ಕೆ ಪತ್ರ ಬರೆದು ನೇರ ನೇಮಕಾತಿ ಎದುರಾಗಿ ಮೀಸಲಿರಿಸಿರುವ ಹುದ್ದೆಗಳಿಗೆ ಮುಂಬಡ್ತಿ ಮೂಲಕ ತುಂಬಲು ಒಂದು ಬಾರಿಯ ಅವಕಾಶದಂತೆ ಅನುಮತಿ ನೀಡಲು ಕೋರಬಹುದಾಗಿದೆ ಎಂದು ತಿಳಿಸಿದರು.

**ನಿರ್ಣಯ:**

ಚರ್ಚೆಯ ನಂತರ, ಡಾ. ಎಂ. ಶೈಲಜ ಮತ್ತು ಡಾ.ಎನ್. ಧಶರಥ್ ಅವರು ಈ ಬಗ್ಗೆ ಪರಿಶೀಲಿಸಿ ವಿಶ್ವವಿದ್ಯಾಲಯದ ಕೆಲಸ ಕಾರ್ಯಗಳು ಹಾಗೂ ನೌಕರರ ಹಿತದೃಷ್ಟಿಯಿಂದ ಒಂದು ವರದಿಯನ್ನು ನೀಡಬೇಕೆಂದು ಸಿಂಡಿಕೇಟ್ ನಿರ್ಣಯಿಸಿತು.

***Proceedings of the Special meeting of the Syndicate held on 18.01.2022***

**ವಿಷಯ ಸಂಖ್ಯೆ 6:** ದಿನಾಂಕ 17.11.2021 ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯದನ್ವಯ ಯು.ವಿ.ಸಿ.ಇ ವಿಭಾಗದಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳಾದ ಫ಼ೋರ್‌ಮೆನ್ ಮತ್ತು ಇನ್‌ಸ್ಟ್ರಕ್ಟರ್ ವೃಂದಗಳಿಗೆ ವೃಂದ ಮತ್ತು ನೇಮಕಾತಿಗಳನ್ವಯ ಪದೋನ್ನತಿ ನೀಡುವ ಬಗ್ಗೆ.

ಕುಲಪತಿಗಳು ಮಾತನಾಡಿ, ಯು.ವಿ.ಸಿ.ಇ. ಕಾಲೇಜಿನಲ್ಲಿ ಮೂರು ಫೋರ್ಮನ್ ಹುದ್ದೆಗಳು ಖಾಲಿ ಉಳಿದಿವೆ. ಪರಾಮರ್ಶಿತ ಟಿಪ್ಪಣಿಯಲ್ಲಿ ನಮೂದಾಗಿರುವ ಯಾವುದೇ ನೌಕರರು ಫೋರ್ಮನ್ ಹುದ್ದೆಗೆ ವಿದ್ಯಾರ್ಹತೆ ಹೊಂದಿರುವುದಿಲ್ಲವೆಂದು ತಿಳಿಸಿದರು. ಮುಂದುವರೆದು, ಪ್ರಸ್ತುತ 29 (ಇಪತ್ತೊಂಬತ್ತು) ಇನ್ಸ್ಟ್ರಕ್ಟರ್ ಹುದ್ದೆಗಳು ಖಾಲಿ ಉಳಿದಿವೆ. ಸದರಿ ಹುದ್ದೆಗಳ ಪೈಕಿ ಮುಂಬಡ್ತಿಗೆ ಮೀಸಲಿರಿಸಿರುವ ಒಟ್ಟು 06(ಅರು) ಹುದ್ದೆಗಳು ಹಾಗೂ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಅಭ್ಯರ್ಥಿಗಳಿಗೆ ಮೀಸಲಿರಿಸಿರುವ 02(ಎರಡು) ಹುದ್ದೆಗಳು, ಒಟ್ಟು 08(ಎಂಟು) ಇನ್ಸ್ಟ್ರಕ್ಟರ್ ಹುದ್ದೆಗಳು ಲಭ್ಯವಿವೆ. ಹೈದ್ರಾಬಾದ್ ಕರ್ನಾಟಕ ಪ್ರದೇಶದ ಅಭ್ಯರ್ಥಿಗಳು ಲಭ್ಯವಿಲ್ಲದಿರುವುದರಿಂದ, ಹೈದ್ರಾಬಾದ್ ಕರ್ನಾಟಕ ಪ್ರದೇಶದ ಅಭ್ಯರ್ಥಿಗಳಿಗೆ ಮೀಸಲಿರಿಸಿರುವ 02(ಎರಡು) ಹುದ್ದೆಗಳಿಗೆ ಸ್ಥಳೀಯ ವೃಂದದ ಅಭ್ಯರ್ಥಿಗಳಿಗೆ ಮುಂಬಡ್ತಿ ನೀಡಬಹುದಾಗಿದೆ ಎಂದು ತಿಳಿಸಿದರು.

**ನಿರ್ಣಯ:**

ಚರ್ಚೆಯ ನಂತರ, ಪರಾಮರ್ಶಿತ ಟಿಪ್ಪಣಿಯಂತೆ ಖಾಲಿ ಉಳಿದಿರುವ 06(ಆರು) ಇನ್ಸ್ಟ್ರಕ್ಟರ್ ಹುದ್ದೆಗಳಿಗೆ ಮೆಕ್ಯಾನಿಕಲ್ ಹುದ್ದೆಯಿಂದ ಮುಂಬಡ್ತಿ ನೀಡಲು ಸಿಂಡಿಕೇಟ್ ಅನುಮೋದಿಸಿತು. ಮುಂದುವರೆದು, ಹೈದ್ರಾಬಾದ್ ಕರ್ನಾಟಕ ಪ್ರದೇಶದ ಅಭ್ಯರ್ಥಿಗೆ ಮೀಸಲಿರಿಸುವ 02 (ಎರಡು) ಮುಂಬಡ್ತಿ ಹುದ್ದೆಗಳಿಗೆ, ಹೈದ್ರಾಬಾದ್ ಕರ್ನಾಟಕ ಪ್ರದೇಶದ ಅಭ್ಯರ್ಥಿ ಲಭ್ಯವಿಲ್ಲದಿದ್ದರೆ, ಸ್ಥಳೀಯ ವೃಂದದಿಂದ ಮುಂಬಡ್ತಿ ನೀಡಲು ಸಿಂಡಿಕೇಟ್ ಅನುಮೋದಿಸಿತು.

**ವಿಷಯ ಸಂಖ್ಯೆ 7:** ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ ದಿನಗೂಲಿ /ಮಾಸಿಕ ಕ್ರೋಢೀಕೃತ ನೌಕರರಿಗೆ ನೀಡುತ್ತಿರುವ ಶೇ. 75% ತುಟ್ಟಿ ಭತ್ಯೆ ಮತ್ತು ಮನೆ ಬಾಡಿಗೆ ಭತ್ಯೆ ಹೆಚ್ಚಿಸುವ ಇಲ್ಲವೇ ಇ.ಎಸ್.ಐ ಮತ್ತು ಪಿ.ಎಫ್ ನೀಡುವ ವಿಷಯದ ಬಗ್ಗೆ ಹಾಗೂ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ರವರು ದಿನಾಂಕ 02.09.2021 ರ ಪತ್ರದಲ್ಲಿ ನೀಡಿರುವ ನಿರ್ದೇಶನದಂತೆ ಮುಂದಿನ ಕ್ರಮ ಕೈಗೊಳ್ಳುವ ಬಗ್ಗೆ.

ಕುಲಪತಿಗಳು ಮಾತನಾಡಿ, ವಿಶ್ವವಿದ್ಯಾಲಯದಲ್ಲಿ ಒಟ್ಟು 94 ಜನ ದಿನಗೂಲಿ /ಮಾಸಿಕ ಕ್ರೋಢೀಕೃತ ನೌಕರರು ಕಾರ್ಯ ನಿರ್ವಹಿಸುತ್ತಿದ್ದು, ಅವರುಗಳ ಪೈಕಿ 79 (ಎಪ್ಪತ್ತೊಂಬತ್ತು) ಜನ ವಿಶ್ವವಿದ್ಯಾಲಯದ ವಿವಿಧ ವಿಭಾಗಳಲ್ಲಿ ಹಾಗೂ 06 (ಆರು) ಜನ ಯು.ವಿ.ಸಿ.ಯ ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್ ಸೈನ್ ಇಂಜಿನಿಯರಿಂಗ್ ವಿಭಾಗ ಹಾಗೂ 09(ಒಂಬತ್ತು) ಜನ ಕಂಪ್ಯೂಟರ್ ಲ್ಯಾಬ್ ಇನ್ಸ್ಟ್ರಕ್ಟರಗಳು ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ವಿಶ್ವವಿದ್ಯಾಲಯದ ವಿವಿಧ ವಿಭಾಗಳಲ್ಲಿ 79 (ಎಪ್ಪತ್ತೊಂಬತ್ತು) ಜನ ನೌಕರರನ್ನೂ ಸಹ ಅವರ ವಿದ್ಯಾರ್ಹತೆಗನುಸಾರವಾಗಿ ಪಟ್ಟಿ ಮಾಡಲಾಗಿದೆ. ಮೇಲ್ಕಂಡ ನೌಕರರು ಸುಮಾರು ಇಪ್ಪತ್ತು ವರ್ಷಗಳಿಂದ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ ಹಾಗೂ ಒಂಬತ್ತು 09(ಒಂಬತ್ತು) ಜನ ಕಂಪ್ಯೂಟರ್ ಲ್ಯಾಬ್ ಇನ್ಸ್ಟ್ರಕ್ಟರಗಳನ್ನು ಪ್ರಕಟಣೆಯನ್ನು ನೀಡಿ ಆನಂತರ ನೇಮಕಾತಿ ಮಾಡಿಕೊಳ್ಳಲಾಗಿದೆ. ಅವರಿಗೆ ಮೊದಲು ಎರಡು ವರ್ಷದ ಅವಧಿಗೆ ಆದೇಶ ನೀಡಲಾಗಿದ್ದು, ನಂತರ ಒಂದು ವರ್ಷದ ಅವಧಿಗೆ ಆದೇಶ ನೀಡಲಾಗಿದೆ.

ಈ ನೌಕರರಿಗೆ ಕೋರ್ಟ್ ಆದೇಶದ ಪ್ರಕಾರ 100% ಡಿ.ಎ. ಮತ್ತು ಹೆಚ್.ಆರ್.ಎ. ನೀಡಿದರೆ ಅವರ ಭವಿಷ್ಯಕ್ಕೆ ಅನುಕೂಲವಾಗುತ್ತದೆ ಮತ್ತು ಮೇಲ್ಕಂಡ ನೌಕರಗಳನ್ನು ಖಯಮಾತಿ ಮಾಡಲು ಅನುಕೂಲವಾಗಬಹುದು. ಈಗಾಗಲೇ ಸಫಾಯಿ ಕರ್ಮಚಾರಿ ಹಾಗೂ ಕಾರ್ಮಿಕ ಇಲಾಖೆಯು ದಿನಗೂಲಿ ಹಾಗೂ ಹೊರಗುತ್ತಿಗೆ ನೌಕರರಿಗೆ ಇ.ಎಸ್.ಐ. ಮತ್ತು ಪಿ.ಎಫ್. ಮೊತ್ತವನ್ನು ನೀಡಬೇಕೆಂದು ನಿರ್ದೇಶನ ನೀಡಿದೆ. ಆದಕಾರಣ 100% ಡಿ.ಎ. ಮತ್ತು ಹೆಚ್.ಆರ್.ಎ. ನೀಡದಿದ್ದರೆ, ಇ.ಎಸ್.ಐ. ಮತ್ತು ಪಿ.ಎಫ್. ಅನ್ನು ನೀಡಬೇಕಾಗುತ್ತದೆ ಎಂದು ತಿಳಿಸಿದರು. ಇವುಗಳಲ್ಲಿ ಯಾವುದನ್ನು ನೀಡಿದರೂ ತಗಲುವ ವೆಚ್ಚ ಒಂದೇ ಆಗಿರುತ್ತದೆ.

ಕುಲಸಚಿವರು, ಈ ಬಗ್ಗೆ ಸರ್ಕಾರಕ್ಕೆ ಮಾಹಿತಿ ಒದಗಿಸಿ ಆದೇಶ ಪಡೆದುಕೊಳ್ಳಬಹುದೆಂದು ತಿಳಿಸಿದರು.

ಡಾ. ಧನಂಜಯ ಬಿ.ಆರ್. ಹಾಗೂ ಡಾ. ಎಂ. ಧಶರತ್ ಅವರು ಮಾತನಾಡಿ, ಸದರಿ ನೌಕರರ ಸೇವಾ ಭದ್ರತೆ ಹಿತದೃಷ್ಟಿಯಿಂದ ಇ.ಎಸ್.ಐ. ಮತ್ತು ಪಿ.ಎಫ್. ನೀಡಬಹುದೆಂದು ತಿಳಿಸಿದರು.

**ನಿರ್ಣಯ**

ದೀರ್ಘ ಚರ್ಚೆಯ ನಂತರ, ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಒಟ್ಟು 94 ಜನ ದಿನಗೂಲಿ /ಮಾಸಿಕ ಕ್ರೋಢೀಕೃತ ನೌಕರರಿಗೆ ಭವಿಷ್ಯಾವರ್ತಿಯಾಗಿ ಇ.ಎಸ್.ಐ. ಮತ್ತು ಪಿ.ಎಫ್. ಸೌಲಭ್ಯ ನೀಡಲು ಸಿಂಡಿಕೇಟ್ ಅನುಮೋದಿಸಿತು.

***Proceedings of the Special meeting of the Syndicate held on 18.01.2022***

**ವಿಷಯ ಸಂಖ್ಯೆ 8:** ಶ್ರೀ ಶಶಿಕುಮಾರ್ ಕೆ, ದಿವಂಗತ ಶ್ರೀ ಕೇಶವಲು ಜಿ, ಅನುಚರರು, ಸಮಾಜಕಾರ್ಯ ವಿಭಾಗ, ಇವರ ಪುತ್ರ ಇವರನ್ನು ಅನುಕಂಪದ ಆಧಾರದ ಮೇಲೆ ಹೆಚ್ಚಿನ ವಿವರಗಳೊಂದಿಗೆ ನೇಮಕಾತಿಗೆ ಪರಿಗಣಿಸುವ ಬಗ್ಗೆ.

***ನಿರ್ಣಯ:***

ಚರ್ಚೆಯ ನಂತರ, ದಿವಂಗತ ಶ್ರೀ ಕೇಶವಲು ಜಿ, ಅನುಚರರು, ಸಮಾಜಕಾರ್ಯ ವಿಭಾಗ, ಇವರ ಪುತ್ರ ಶ್ರೀ ಶಶಿಕುಮಾರ್ ಕೆ ಅವರನ್ನು ಅನುಕಂಪದ ಆದಾರದ ಮೇಲೆ ವಿಶ್ವವಿದ್ಯಾಲಯದಲ್ಲಿ, ನೇರ ನೇಮಕಾತಿ ಎದುರು ಖಾಲಿ ಇರುವ ಗ್ರೂಪ್ 'ಡಿ' ಹುದ್ದೆಗೆ ಕರ್ನಾಟಕ ನಾಗರೀಕ ಸೇವಾ (Appointment on Compassionate Grounds) ನಿಯಮ 1996ರ ಪ್ರಕಾರ ನೇಮಕ ಮಾಡಲು, ಸಿಂಡಿಕೇಟ್ ಸರ್ವಾನುಮತದಿಂದ ನಿರ್ಣಯಿಸಿತು.

***Proceedings of the Special meeting of the Syndicate held on 18.01.2022***

**ವಿಷಯ ಸಂಖ್ಯೆ 9:** ಶ್ರೀ ರಾಕೇಶ್.ಪಿ.ಎಸ್, ದಿವಂಗತ ಶ್ರೀ ಪುಟ್ಟಸ್ವಾಮಿ, ಹಿರಿಯ ಸಹಾಯಕರು, ಶೈಕ್ಷಣಿಕ ವಿಭಾಗ-3 ಇವರ ಪುತ್ರ ಇವರನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ಪರಿಗಣಿಸುವ ಬಗ್ಗೆ.

ಕುಲಪತಿಗಳು ಮಾತನಾಡಿ, ಮೈಸೂರು ವಿಶ್ವವಿದ್ಯಾಲಯದಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಾತಿಯನ್ನು ಗ್ರೂಪ್ 'ಸಿ' ವೃಂದದ ಕನಿಷ್ಠ ಹುದ್ದೆಯಾದ ಕಿರಿಯ ಸಹಾಯಕ ಹುದ್ದೆಗೆ ನೇಮಕಾತಿ ಮಾಡಲು ನಿಯಮಗಳನ್ನು ರಚಿಸಿಕೊಂಡಿದೆ. ಅದರಂತೆ, ಹೆಚ್ಚಿನ ವಿದ್ಯಾರ್ಹತೆ ಇದ್ದರೂ ಕೂಡ ಗ್ರೂಪ್ 'ಸಿ' ವೃಂದದ ಕನಿಷ್ಠ ಹುದ್ದೆಯಾದ ಕಿರಿಯ ಸಹಾಯಕ ಹುದ್ದೆಗೆ ನೇಮಕಾತಿ ಮಾಡುತ್ತಿದೆ. ಮೈಸೂರು ವಿಶ್ವವಿದ್ಯಾಲಯದಲ್ಲಿರುವಂತೆ ಬೆಂಗಳೂರು ವಿಶ್ವವಿದ್ಯಾಲಯದಲ್ಲೂ ಸಹ ಕಿರಿಯ ಸಹಾಯಕ ಹುದ್ದೆಗೆ ಮಾತ್ರ ಅನುಕಂಪದ ಆಧಾರದ ಮೇಲೆ ನೇಮಕಾತಿಯನ್ನು ಪರಿಗಣಿಸಬಹುದಾಗಿದೆ.

***ನಿರ್ಣಯ:***

ಚರ್ಚೆಯ ನಂತರ, ದಿವಂಗತ ಶ್ರೀ ಪುಟ್ಟಸ್ವಾಮಿ, ಹಿರಿಯ ಸಹಾಯಕರು, ಶೈಕ್ಷಣಿಕ ವಿಭಾಗ-3 ಇವರ ಪುತ್ರ ಶ್ರೀ ರಾಕೇಶ್.ಪಿ.ಎಸ್ ಅವರನ್ನು ಅನುಕಂಪದ ಆಧಾರದ ಮೇಲೆ ವಿಶ್ವವಿದ್ಯಾಲಯದಲ್ಲಿ, ನೇರ ನೇಮಕಾತಿ ಎದುರು ಖಾಲಿ ಇರುವ ಕಿರಿಯ ಸಹಾಯಕ ಹುದ್ದೆಗೆ (ಗ್ರೂಪ್ 'ಸಿ' ಕನಿಷ್ಠ ಹುದ್ದೆ) ಕರ್ನಾಟಕ ನಾಗರೀಕ ಸೇವಾ

(Appointment on Compassionate Grounds) ನಿಯಮ 1996ರ ಪ್ರಕಾರ ನೇಮಕ ಮಾಡಲು, ಸಿಂಡಿಕೇಟ್ ಸರ್ವಾನುಮತದಿಂದ ನಿರ್ಣಯಿಸಿತು.

***Proceedings of the Special meeting of the Syndicate held on 18.01.2022***

**ವಿಷಯ ಸಂಖ್ಯೆ 10:** ಶ್ರೀ ಚೇತನ್ ಯು, ದಿವಂಗತ ಶ್ರೀ ಉಮಾಶಂಕರ್.ಆರ್, ಕಿರಿಯ ಸಹಾಯಕರು, ಪಿ.ಜಿ ಹಾಸ್ಟೆಲ್–1, ಇವರ ಪುತ್ರ ಇವರನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ಪರಿಗಣಿಸುವ ಬಗ್ಗೆ.

ಕುಲಪತಿಗಳು ಮಾತನಾಡಿ, ಮೈಸೂರು ವಿಶ್ವವಿದ್ಯಾಲಯದಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಾತಿಯನ್ನು ಗ್ರೂಪ್ 'ಸಿ' ವೃಂದದ ಕನಿಷ್ಠ ಹುದ್ದೆಯಾದ ಕಿರಿಯ ಸಹಾಯಕ ಹುದ್ದೆಗೆ ನೇಮಕಾತಿ ಮಾಡಲು ನಿಯಮಗಳನ್ನು ರಚಿಸಿಕೊಂಡಿದೆ. ಅದರಂತೆ, ಹೆಚ್ಚಿನ ವಿದ್ಯಾರ್ಹತೆ ಇದ್ದರೂ ಕೂಡ ಗ್ರೂಪ್ 'ಸಿ' ವೃಂದದ ಕನಿಷ್ಠ ಹುದ್ದೆಯಾದ ಕಿರಿಯ ಸಹಾಯಕ ಹುದ್ದೆಗೆ ನೇಮಕಾತಿ ಮಾಡುತ್ತಿದೆ. ಮೈಸೂರು ವಿಶ್ವವಿದ್ಯಾಲಯದಲ್ಲಿರುವಂತೆ ಬೆಂಗಳೂರು ವಿಶ್ವವಿದ್ಯಾಲಯದಲ್ಲೂ ಸಹ ಕಿರಿಯ ಸಹಾಯಕ ಹುದ್ದೆಗೆ ಮಾತ್ರ ಅನುಕಂಪದ ಆಧಾರದ ಮೇಲೆ ನೇಮಕಾತಿಯನ್ನು ಪರಿಗಣಿಸಬಹುದಾಗಿದೆ.

***ನಿರ್ಣಯ:***

ಚರ್ಚೆಯ ನಂತರ, ದಿವಂಗತ ಶ್ರೀ ಉಮಾಶಂಕರ್.ಆರ್, ಕಿರಿಯ ಸಹಾಯಕರು, ಪಿ.ಜಿ ಹಾಸ್ಟೆಲ್–1, ಇವರ ಪುತ್ರ ಶ್ರೀ ಚೇತನ್ ಯು, ಅವರನ್ನು ಅನುಕಂಪದ ಆಧಾರದ ಮೇಲೆ ವಿಶ್ವವಿದ್ಯಾಲಯದಲ್ಲಿ, ನೇರ ನೇಮಕಾತಿ ಎದುರು ಖಾಲಿ ಇರುವ ಕಿರಿಯ ಸಹಾಯಕ ಹುದ್ದೆಗೆ (ಗ್ರೂಪ್ 'ಸಿ' ಕನಿಷ್ಠ ಹುದ್ದೆ) ಕರ್ನಾಟಕ ನಾಗರೀಕ ಸೇವಾ (Appointment on Compassionate Grounds) ನಿಯಮ 1996ರ ಪ್ರಕಾರ ನೇಮಕ ಮಾಡಲು, ಸಿಂಡಿಕೇಟ್ ಸರ್ವಾನುಮತದಿಂದ ನಿರ್ಣಯಿಸಿತು.

***Proceedings of the Special meeting of the Syndicate held on 18.01.2022***

**ವಿಷಯ ಸಂಖ್ಯೆ 11:** ಶ್ರೀ ಹೃತಿಕ್.ಟಿ, ದಿವಂಗತ ಶ್ರೀ ತಿಮ್ಮಪ್ಪ.ವಿ, ಅಧೀಕ್ಷಕರು, ಸಿವಿಲ್ ಇಂಜಿನಿಯರಿಂಗ್ ವಿಭಾಗ, ಇವರ ಪುತ್ರ ಇವರನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ಪರಿಗಣಿಸುವ ಬಗ್ಗೆ.

ಕುಲಪತಿಗಳು ಮಾತನಾಡಿ, ಮೈಸೂರು ವಿಶ್ವವಿದ್ಯಾಲಯದಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಾತಿಯನ್ನು ಗ್ರೂಪ್ 'ಸಿ' ವೃಂದದ ಕನಿಷ್ಠ ಹುದ್ದೆಯಾದ ಕಿರಿಯ ಸಹಾಯಕ ಹುದ್ದೆಗೆ ನೇಮಕಾತಿ ಮಾಡಲು ನಿಯಮಗಳನ್ನು ರಚಿಸಿಕೊಂಡಿದೆ. ಅದರಂತೆ, ಹೆಚ್ಚಿನ ವಿದ್ಯಾರ್ಹತೆ ಇದ್ದರೂ ಕೂಡ ಗ್ರೂಪ್ 'ಸಿ' ವೃಂದದ ಕನಿಷ್ಠ ಹುದ್ದೆಯಾದ ಕಿರಿಯ ಸಹಾಯಕ ಹುದ್ದೆಗೆ ನೇಮಕಾತಿ ಮಾಡುತ್ತಿದೆ. ಮೈಸೂರು

ವಿಶ್ವವಿದ್ಯಾಲಯದಲ್ಲಿರುವಂತೆ ಬೆಂಗಳೂರು ವಿಶ್ವವಿದ್ಯಾಲಯದಲ್ಲೂ ಸಹ ಕಿರಿಯ ಸಹಾಯಕ ಹುದ್ದೆಗೆ ಮಾತ್ರ ಅನುಕಂಪದ ಆಧಾರದ ಮೇಲೆ ನೇಮಕಾತಿಯನ್ನು ಪರಿಗಣಿಸಬಹುದಾಗಿದೆ.

*ನಿರ್ಣಯ:*

ಚರ್ಚೆಯ ನಂತರ, ದಿವಂಗತ ಶ್ರೀ ತಿಮ್ಮಪ್ಪ ವಿ, ಅಧೀಕ್ಷಕರು, ಸಿವಿಲ್ ಇಂಜಿನಿಯರಿಂಗ್ ವಿಭಾಗ, ಇವರ ಪುತ್ರ ಶ್ರೀ· ಹೃತಿಕ್ ಟಿ, ಅವರನ್ನು ಅನುಕಂಪದ ಆಧಾರದ ಮೇಲೆ ವಿಶ್ವವಿದ್ಯಾಲಯದಲ್ಲಿ, ನೇರ ನೇಮಕಾತಿ ಎದುರು ಖಾಲಿ ಇರುವ ಕಿರಿಯ ಸಹಾಯಕ ಹುದ್ದೆಗೆ (ಗ್ರೂಪ್ 'ಸಿ' ಕನಿಷ್ಠ ಹುದ್ದೆ) ಕರ್ನಾಟಕ ನಾಗರೀಕ ಸೇವಾ (Appointment on Compassionate Grounds) ನಿಯಮ 1996ರ ಪ್ರಕಾರ ನೇಮಕ ಮಾಡಲು, ಸಿಂಡಿಕೇಟ್ ಸರ್ವಾನುಮತದಿಂದ ನಿರ್ಣಯಿಸಿತು.



**ವಿಷಯ ಸಂಖ್ಯೆ 12:** ಶ್ರೀ ಧನುಷ್.ಹೆಚ್.ಬಿ ದಿವಂಗತ ಶ್ರೀ. ಬಸಪ್ಪ, ಹೆಚ್.ಎಸ್. ಹಿರಿಯ ಸಹಾಯಕರು, ಹಣಕಾಸು ವಿಭಾಗ ಇವರ ಪುತ್ರ ಇವರನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ಪರಿಗಣಿಸುವ ಬಗ್ಗೆ.

ಕುಲಪತಿಗಳು ಮಾತನಾಡಿ, ಮೈಸೂರು ವಿಶ್ವವಿದ್ಯಾಲಯದಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಾತಿಯನ್ನು ಗ್ರೂಪ್ 'ಸಿ' ವೃಂದದ ಕನಿಷ್ಠ ಹುದ್ದೆಯಾದ ಕಿರಿಯ ಸಹಾಯಕ ಹುದ್ದೆಗೆ ನೇಮಕಾತಿ ಮಾಡಲು ನಿಯಮಗಳನ್ನು ರಚಿಸಿಕೊಂಡಿದೆ. ಅದರಂತೆ, ಹೆಚ್ಚಿನ ವಿದ್ಯಾರ್ಹತೆ ಇದ್ದರೂ ಕೂಡ ಗ್ರೂಪ್ 'ಸಿ' ವೃಂದದ ಕನಿಷ್ಠ ಹುದ್ದೆಯಾದ ಕಿರಿಯ ಸಹಾಯಕ ಹುದ್ದೆಗೆ ನೇಮಕಾತಿ ಮಾಡುತ್ತಿದೆ. ಮೈಸೂರು ವಿಶ್ವವಿದ್ಯಾಲಯದಲ್ಲಿರುವಂತೆ ಬೆಂಗಳೂರು ವಿಶ್ವವಿದ್ಯಾಲಯದಲ್ಲೂ ಸಹ ಕಿರಿಯ ಸಹಾಯಕ ಹುದ್ದೆಗೆ ಮಾತ್ರ ಅನುಕಂಪದ ಆಧಾರದ ಮೇಲೆ ನೇಮಕಾತಿಯನ್ನು ಪರಿಗಣಿಸಬಹುದಾಗಿದೆ.

*ನಿರ್ಣಯ:*

ಚರ್ಚೆಯ ನಂತರ, ದಿವಂಗತ ಶ್ರೀ. ಬಸಪ್ಪ, ಹೆಚ್.ಎಸ್. ಹಿರಿಯ ಸಹಾಯಕರು, ಹಣಕಾಸು ವಿಭಾಗ, ಇವರ ಪುತ್ರ ಶ್ರೀ ಧನುಷ್ ಹೆಚ್.ಬಿ., ಅವರನ್ನು ಅನುಕಂಪದ ಆಧಾರದ ಮೇಲೆ ವಿಶ್ವವಿದ್ಯಾಲಯದಲ್ಲಿ, ನೇರ ನೇಮಕಾತಿ ಎದುರು ಖಾಲಿ ಇರುವ ಕಿರಿಯ ಸಹಾಯಕ ಹುದ್ದೆಗೆ (ಗ್ರೂಪ್ 'ಸಿ' ಕನಿಷ್ಠ ಹುದ್ದೆ) ಕರ್ನಾಟಕ ನಾಗರೀಕ ಸೇವಾ (Appointment on Compassionate Grounds) ನಿಯಮ 1996ರ ಪ್ರಕಾರ ನೇಮಕ ಮಾಡಲು, ಸಿಂಡಿಕೇಟ್ ಸರ್ವಾನುಮತದಿಂದ ನಿರ್ಣಯಿಸಿತು.

**ವಿಷಯ ಸಂಖ್ಯೆ 13** ಶ್ರೀಮತಿ ಪದ್ಮಶ್ರೀ.ವಿ, ದಿವಂಗತ ಶ್ರೀ. ಶ್ರೀನಿವಾಸ.ಕೆ, ಗ್ರೂಪ್ 'ಡಿ' ಅಭಿವೃದ್ಧಿ ವಿಭಾಗ ಇವರ ಪತ್ನಿ ಇವರನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ಪರಿಗಣಿಸುವ ಬಗ್ಗೆ.

***ನಿರ್ಣಯ:***

ಚರ್ಚೆಯ ನಂತರ, ದಿವಂಗತ ಶ್ರೀ ಶ್ರೀನಿವಾಸ.ಕೆ, ಗ್ರೂಪ್ 'ಡಿ', ಅಭಿವೃದ್ಧಿ ವಿಭಾಗ, ಇವರ ಪತ್ನಿ ಶ್ರೀಮತಿ ಪದ್ಮಶ್ರೀ ವಿ, ಅವರನ್ನು ಅನುಕಂಪದ ಆಧಾರದ ಮೇಲೆ ವಿಶ್ವವಿದ್ಯಾಲಯದಲ್ಲಿ, ನೇರ ನೇಮಕಾತಿ ಎದುರು ಖಾಲಿ ಇರುವ ಗ್ರೂಪ್ 'ಡಿ' ಹುದ್ದೆಗೆ ಕರ್ನಾಟಕ ನಾಗರೀಕ ಸೇವಾ (Appointment on Compassionate Grounds) ನಿಯಮ 1996ರ ಪ್ರಕಾರ ನೇಮಕ ಮಾಡಲು, ಸಿಂಡಿಕೇಟ್ ಸರ್ವಾನುಮತದಿಂದ ನಿರ್ಣಯಿಸಿತು.



Item No. **14:** Promotion to Sri Venkatesh Murthy.N, Group 'D', DCC and DE, BUB

***Resolution:***

After detailed discussions, the Syndicate resolved not to consider the request of Sri Venkatesh Murthy.N, Group 'D', DCC and DE, for promotion to Junior Assistant from 04-07-2019 as he was not in the service of the Bangalore University as on that date and opted to serve in the Bengaluru City University during that period.



**ವಿಷಯ ಸಂಖ್ಯೆ 15:** ಶ್ರೀ ಗಿರೀಶ್.ಜಿ, ದಿವಂಗತ ಶ್ರೀ ಗೋವಿಂದನ್.ಎಂ, ಬೈಂಡರ್ ಪರೀಕ್ಷಾ ವಿಭಾಗ ಇವರ ಪುತ್ರ ಇವರನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ಪರಿಗಣಿಸುವ ಬಗ್ಗೆ.

ಕುಲಪತಿಗಳು ಮಾತನಾಡಿ, ಮೈಸೂರು ವಿಶ್ವವಿದ್ಯಾಲಯದಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಾತಿಯನ್ನು ಗ್ರೂಪ್ 'ಸಿ' ವೃಂದದ ಕನಿಷ್ಠ ಹುದ್ದೆಯಾದ ಕಿರಿಯ ಸಹಾಯಕ ಹುದ್ದೆಗೆ ನೇಮಕಾತಿ ಮಾಡಲು ನಿಯಮಗಳನ್ನು ರಚಿಸಿಕೊಂಡಿದೆ. ಅದರಂತೆ, ಹೆಚ್ಚಿನ ವಿದ್ಯಾರ್ಹತೆ ಇದ್ದರೂ ಕೂಡ ಗ್ರೂಪ್ 'ಸಿ' ವೃಂದದ ಕನಿಷ್ಠ ಹುದ್ದೆಯಾದ ಕಿರಿಯ ಸಹಾಯಕ ಹುದ್ದೆಗೆ ನೇಮಕಾತಿ ಮಾಡುತ್ತಿದೆ. ಮೈಸೂರು ವಿಶ್ವವಿದ್ಯಾಲಯದಲ್ಲಿರುವಂತೆ ಬೆಂಗಳೂರು ವಿಶ್ವವಿದ್ಯಾಲಯದಲ್ಲೂ ಸಹ ಕಿರಿಯ ಸಹಾಯಕ ಹುದ್ದೆಗೆ ಮಾತ್ರ ಅನುಕಂಪದ ಆಧಾರದ ಮೇಲೆ ನೇಮಕಾತಿಯನ್ನು ಪರಿಗಣಿಸಬಹುದಾಗಿದೆ.

***ನಿರ್ಣಯ:***

ಚರ್ಚೆಯ ನಂತರ, ದಿವಂಗತ ಶ್ರೀ ಗೋವಿಂದನ್ ಎಂ, ಬೈಂಡರ್, ಪರೀಕ್ಷಾ ವಿಭಾಗ ಇವರ ಪುತ್ರ ಶ್ರೀ ಗಿರೀಶ್ ಜಿ, ಅವರನ್ನು ಅನುಕಂಪದ ಆಧಾರದ ಮೇಲೆ ವಿಶ್ವವಿದ್ಯಾಲಯದಲ್ಲಿ, ನೇರ ನೇಮಕಾತಿ ಎದುರು

ಖಾಲಿ ಇರುವ ಕಿರಿಯ ಸಹಾಯಕ ಹುದ್ದೆಗೆ (ಗ್ರೂಪ್ 'ಸಿ' ಕನಿಷ್ಠ ಹುದ್ದೆ) ಕರ್ನಾಟಕ ನಾಗರೀಕ ಸೇವಾ (Appointment on Compassionate Grounds) ನಿಯಮ 1996ರ ಪ್ರಕಾರ ನೇಮಕ ಮಾಡಲು, ಸಿಂಡಿಕೇಟ್ ಸರ್ವಾನುಮತದಿಂದ ನಿರ್ಣಯಿಸಿತು.

***Proceedings of the Special meeting of the Syndicate held on 18.01.2022***

**ವಿಷಯ ಸಂಖ್ಯೆ 16:** ಶ್ರೀ ಪ್ರಜ್ವಲ್ ಕುಮಾರ್.ಎಸ್, ದಿವಂಗತ ಶ್ರೀ ಶಶಿಕುಮಾರ್. ಈ.ಆರ್, ಇನ್‌ಸ್ಟ್ರಕ್ಟರ್, ಸಿವಿಲ್ ಇಂಜನಿಯರಿಂಗ್ ವಿಭಾಗ ಇವರ ಪುತ್ರ ಇವರನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ಪರಿಗಣಿಸುವ ಬಗ್ಗೆ.

ಕುಲಪತಿಗಳು ಮಾತನಾಡಿ, ಮೈಸೂರು ವಿಶ್ವವಿದ್ಯಾಲಯದಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಾತಿಯನ್ನು ಗ್ರೂಪ್ 'ಸಿ' ವೃಂದದ ಕನಿಷ್ಠ ಹುದ್ದೆಯಾದ ಕಿರಿಯ ಸಹಾಯಕ ಹುದ್ದೆಗೆ ನೇಮಕಾತಿ ಮಾಡಲು ನಿಯಮಗಳನ್ನು ರಚಿಸಿಕೊಂಡಿದೆ. ಅದರಂತೆ, ಹೆಚ್ಚಿನ ವಿದ್ಯಾರ್ಹತೆ ಇದ್ದರೂ ಕೂಡ ಗ್ರೂಪ್ 'ಸಿ' ವೃಂದದ ಕನಿಷ್ಠ ಹುದ್ದೆಯಾದ ಕಿರಿಯ ಸಹಾಯಕ ಹುದ್ದೆಗೆ ನೇಮಕಾತಿ ಮಾಡುತ್ತಿದೆ. ಮೈಸೂರು ವಿಶ್ವವಿದ್ಯಾಲಯದಲ್ಲಿರುವಂತೆ ಬೆಂಗಳೂರು ವಿಶ್ವವಿದ್ಯಾಲಯದಲ್ಲೂ ಸಹ ಕಿರಿಯ ಸಹಾಯಕ ಹುದ್ದೆಗೆ ಮಾತ್ರ ಅನುಕಂಪದ ಆಧಾರದ ಮೇಲೆ ನೇಮಕಾತಿಯನ್ನು ಪರಿಗಣಿಸಬಹುದಾಗಿದೆ.

***ನಿರ್ಣಯ:***

ಚರ್ಚೆಯ ನಂತರ, ದಿವಂಗತ ಶ್ರೀ ಶಶಿಕುಮಾರ್. ಈ.ಆರ್, ಇನ್‌ಸ್ಟ್ರಕ್ಟರ್, ಸಿವಿಲ್ ಇಂಜನಿಯರಿಂಗ್ ವಿಭಾಗ ಇವರ ಪುತ್ರ ಶ್ರೀ ಪ್ರಜ್ವಲ್ ಕುಮಾರ್ ಎಸ್., ಅವರನ್ನು ಅನುಕಂಪದ ಆಧಾರದ ಮೇಲೆ ವಿಶ್ವವಿದ್ಯಾಲಯದಲ್ಲಿ, ನೇರ ನೇಮಕಾತಿ ಎದುರು ಖಾಲಿ ಇರುವ ಕಿರಿಯ ಸಹಾಯಕ ಹುದ್ದೆಗೆ (ಗ್ರೂಪ್ 'ಸಿ' ಕನಿಷ್ಠ ಹುದ್ದೆ) ಕರ್ನಾಟಕ ನಾಗರೀಕ ಸೇವಾ (Appointment on Compassionate Grounds) ನಿಯಮ 1996ರ ಪ್ರಕಾರ ನೇಮಕ ಮಾಡಲು, ಸಿಂಡಿಕೇಟ್ ಸರ್ವಾನುಮತದಿಂದ ನಿರ್ಣಯಿಸಿತು.

***Proceedings of the Special meeting of the Syndicate held on 18.01.2022***

**ವಿಷಯ ಸಂಖ್ಯೆ 17:** ಕುಮಾರಿ ದಿವ್ಯ.ಬಿ. ಶ್ರೀ ಶಶಿಕಿರಣ್.ಎ ಮತ್ತು ಶ್ರೀಮತಿ. ಪ್ರಮಿಳ.ವಿ ಇವರುಗಳನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ಸಲ್ಲಿಸಿರುವ ಅರ್ಜಿಗಳನ್ನು ಪರಿಗಣಿಸುವ ಬಗ್ಗೆ.

ಕುಲಪತಿಗಳು ಮಾತನಾಡಿ, ಮೈಸೂರು ವಿಶ್ವವಿದ್ಯಾಲಯದಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಾತಿಯನ್ನು ಗ್ರೂಪ್ 'ಸಿ' ವೃಂದದ ಕನಿಷ್ಠ ಹುದ್ದೆಯಾದ ಕಿರಿಯ ಸಹಾಯಕ ಹುದ್ದೆಗೆ ನೇಮಕಾತಿ ಮಾಡಲು ನಿಯಮಗಳನ್ನು ರಚಿಸಿಕೊಂಡಿದೆ. ಅದರಂತೆ, ಹೆಚ್ಚಿನ ವಿದ್ಯಾರ್ಹತೆ ಇದ್ದರೂ ಕೂಡ ಗ್ರೂಪ್ 'ಸಿ' ವೃಂದದ ಕನಿಷ್ಠ ಹುದ್ದೆಯಾದ ಕಿರಿಯ ಸಹಾಯಕ ಹುದ್ದೆಗೆ ನೇಮಕಾತಿ ಮಾಡುತ್ತಿದೆ. ಮೈಸೂರು

ವಿಶ್ವವಿದ್ಯಾಲಯದಲ್ಲಿರುವಂತೆ ಬೆಂಗಳೂರು ವಿಶ್ವವಿದ್ಯಾಲಯದಲ್ಲೂ ಸಹ ಕಿರಿಯ ಸಹಾಯಕ ಹುದ್ದೆಗೆ ಮಾತ್ರ ಅನುಕಂಪದ ಆಧಾರದ ಮೇಲೆ ನೇಮಕಾತಿಯನ್ನು ಪರಿಗಣಿಸಬಹುದಾಗಿದೆ.

*ನಿರ್ಣಯ:*

ಚರ್ಚೆಯ ನಂತರ, ಕುಮಾರಿ ದಿವ್ಯ ಬಿ, ಶ್ರೀ ಶಶಿಕಿರಣ್ ಎ ಮತ್ತು ಶ್ರೀಮತಿ ಪ್ರಮಿಳ ವಿ ಇವರುಗಳನ್ನು ಅನುಕಂಪದ ಆಧಾರದ ಮೇಲೆ ವಿಶ್ವವಿದ್ಯಾಲಯದಲ್ಲಿ, ನೇರ ನೇಮಕಾತಿ ಎದುರು ಖಾಲಿ ಇರುವ ಕಿರಿಯ ಸಹಾಯಕ ಹುದ್ದೆಗಳಿಗೆ ಎದುರಾಗಿ (ಗ್ರೂಪ್ 'ಸಿ' ಕನಿಷ್ಠ ಹುದ್ದೆ) ಕರ್ನಾಟಕ ನಾಗರೀಕ ಸೇವಾ (Appointment on Compassionate Grounds) ನಿಯಮ 1996ರ ಪ್ರಕಾರ ನೇಮಕ ಮಾಡಲು, ಸಿಂಡಿಕೇಟ್ ಸರ್ವಾನುಮತದಿಂದ ನಿರ್ಣಯಿಸಿತು.

***Proceedings of the Special meeting of the Syndicate held on 18.01.2022***

**Item No.18:** Construction of Mechanical Engineering Block at UVCE K.R. Circle, Bangalore University, Bengaluru.

The Vice-Chancellor briefed the Syndicate, about the recommendations made by the Committee under the Chairmanship of Mr. S V Ranganath, Former Chief Secretary and Vice-Chairman, Karnataka State Higher Education Council for development of UVCE in to an independent Institute and the details of the reports submitted by another Committee under the Chairmanship of Dr. Sadagopan for upgradation of UVCE in to IIT model. The Government of Karnataka during the period of Sri Siddaramaiah as Chief Minister has sanctioned Rs.25.00 crores and during the period of Sri B.S. Yediyurappa as Chief Minister an amount of Rs.10.00 crores was sanctioned to UVCE. Recently the Karnataka Jala Nigama Niyamitha has released Rs.2.00 crores to the University for the development of UVCE. In all Rs.37.00 crores granted for the development of UVCE. Out of Rs.25.00 crores sanctioned during the year 2018-19, Rs.19.00 crores has been spent for the renovation of Iconic block of the UVCE and another Rs.4.00 crores has been spent towards front portion of Iconic block and other buildings. Initially line-in estimate was prepared for the construction of Mechanical Block at Rs.19.00 crores. Later the Department of Public Works, the Government of Karnataka has prepared an estimate of Rs.55.00 crores for construction of Mechanical block with 6+2 floors, in view of the facts that the Labs, Machine shop and Workshop buildings have been demolished, as they were in the dilapidated conditions. The said estimate of Rs.55.00 crores was approved by the Technical Committee, Works Committee and the Syndicate.

However, the Government directed us to prepare the detailed estimate by including the cost of furniture and equipments. Because of this reason the estimated cost was increased from Rs.55.00 crores to Rs.85.00 crores. He further, informed that nearly Rs.61.00 crores has been received towards fee from UVCE students from the past five years. The details are provided as annexure to the agenda note. Therefore, the Syndicate may approve for incurring expenditure of Rs.29.00 crores from the current financial year budget head towards construction of Mechanical Block. The Vice-Chancellor informed the Syndicate that the Government of Karnataka has approved the estimate for construction of Mechanical building at an estimated cost of Rs.85.00 crores, vide Government Order No. ED 117 HPT 2020 Belagavi dated: 22-12-2021. The Finance Committee at its meeting held on 30-12-2021 has approved for re-appropriation of additional amount of Rs.9.00 crores from the other budget heads. Rs.20.00 crores has already been earmarked in the current year budget head. The University has to meet the expenditure of Rs.29.00 crores during this year. Further, the Finance Committee took a decision that the remaining expenditure may be met out from the fees collected from UVCE students in the coming years, if UVCE is within the Bangalore University. In case UVCE is separated, the remaining expenditure shall be met from the internal resource of UVCE towards construction of Mechanical Block. As per the proceedings of the meeting dated: 25-12-2021 held under the Chairmanship of Hon'ble Education Minister, I have written to the Government to entrust the construction of the Mechanical block to one of the Government agencies. In turn, the Government of Karnataka has approved to entrust the construction works to the Engineering Division of Department of Health and Family Welfare, Govt. of Karnataka, Magadi Road, Bengaluru, vide order No. ED 117 HPT 2021 dated: 01-01-2022.

With the above facts, the Vice-Chancellor has requested for approval of the above developments and for re-appropriation of Rs.9.00 crores and for payment of Rs.29.00 crores towards construction of Mechanical block during the financial year 2021-22.

***Resolution:***

After detailed discussions, the Syndicate resolved to approve the entrustment of construction work of Mechanical Block of UVCE to Engineering Division of

Department of Health and Family Welfare, Govt. of Karnataka, Magadi Road, Bengaluru, as per Government order No. ED 117 HPT 2021 dated: 01-01-2022 and approve for re-appropriation of Rs.9.00 crores as per the proceedings of the meeting of the Finance Committee held on 30-12-2021. Further, the Syndicate resolved to release Rs.29.00 crores towards construction of Mechanical block during the financial year 2021-22. The remaining amount of the cost of construction of above said building shall be met out from the internal resources of UVCE and fees collected from the students of UVCE from the next academic year.

***Proceedings of the Special meeting of the Syndicate held on 18.01.2022***

**Item No.19:** Construction of Post Graduate Centre at Jigenahalli Village, Bangalore University, Ramanagara.

The Vice-Chancellor, briefed that the Government of Karnataka has sanctioned 2 acres of land at Sy.No.92 of Jeegenhalli Village, Kasaba Hobli Ramanagara Taluk for construction of own building for Ramanagara Post Graduate Centre. Further, the Government has earmarked 8.00 acres of land at Sy. No. 98 of Jeegenhalli Village and 1.35 acres at Sy.No.83 of Bilagumba Village of Ramanagara Taluk for construction of Ramanagara Post Graduate Centre building. The estimate of construction of Ramanagara Post Graduate Centre building at a cost of Rs.49.90 Crores was approved by the Government of Karnataka vide order No. ED 127 HPU 2021 Belagavi dated: 22-12-2021. Further, as per the proceedings of the meeting dated: 25-12-2021 held under the Chairmanship of Hon'ble Education Minister, I have written to the Government to entrust the construction of the Ramanagar PG Centre Building to one of the Government agencies. In turn, the Government of Karnataka has approved for entrustment of the construction works to the Engineering Division of the Department of Health and Family Welfare, Govt. of Karnataka, Magadi Road, Bengaluru, vide order No. ED 127 HPU 2021 dated: 01-01-2022. The Hon'ble Chief Minister has laid the foundation stone for the construction of the above building on 03-01-2022. The estimate of Rs.49.90 crores has already been approved by the bodies of the University i.e., Technical Committee, Works Committee and the Syndicate. The budget provisions of Rs.15.00 crores for construction of new building for Ramanagara Post Graduate Centre and Rs.10.00 Crores towards procurement of land for the PG Centre have been made. Since the Government is granting land, the

cost earmarked for purchase of land may be utilized for construction of building. With the above details, the Vice-Chancellor informed the Syndicate to approve the entrustment of Civil works to the Engineering Division of Department of Health and Family Welfare, Govt. of Karnataka, Magadi Road, Bengaluru as per the Govt. order.

***Resolution:***

After detailed discussions, the Syndicate resolved to approve the above developments and for entrustment of Civil works of construction of Ramanagara Post Graduate Centre building to the Engineering Division of the Department of Health and Family Welfare, Govt. of Karnataka, Magadi Road, Bengaluru, as per the Government order No. ED 127 HPU 2021 dated: 01-01-2022 and release of Rs.25.00 Crores towards initial deposit for the above works.

ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ಕುಲಪತಿಯವರು